# KANNADA CODE NO. 115
# CLASS XII : ( 2017 – 2018)
# MARKING SCHEME
## SUBJECT : KANNADA 2017 – 18

**TIME : 3 HOURS** **MARKS : 100**

---

**ಸೂಚನೆಗಳು : 1. ಈ ಪ್ರಶ್ನೆ ಪತ್ರಿಕೆಯು ಎ, ಬಿ, ಸಿ ಮತ್ತು ಡಿ ಎಂಬ ನಾಲ್ಕು ಭಾಗಗಳನ್ನೊಳಗೊಂಡಿರುತ್ತದೆ.**

---

## Section – A Grammar : 25 Marks
### ವಿಭಾಗ – ಎ (ವ್ಯಾಕರಣ) : 25 ಅಂಕಗಳು

**ಪ್ರಶ್ನೆ 1. ಅ) ಕೆಳಗಿನ ವಾಕ್ಯವನ್ನು ಪ್ರಶ್ನಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ.** 1

ಗೀತಾ ಎಂತಹ ಮಗುವಿಗೆ ಜನ್ಮ ನೀಡಿದಳು? **ಅಥವಾ** ಗೀತಾ ಯಾವ ಮಗುವಿಗೆ ಜನ್ಮ ನೀಡಿದಳು?

**ಅಥವಾ** ಯಾರು ಹೆಣ್ಣು ಮಗುವಿಗೆ ಜನ್ಮ ನೀಡಿದರು?

**ಆ) ಕೆಳಗಿನ ವಾಕ್ಯವನ್ನು ನಿಷೇಧಾರ್ಥದಲ್ಲಿ ಬಳಸಿ.** 1

ಮೈಸೂರಿನ ಕಟ್ಟಡಗಳು ಅತ್ಯಂತ ಎತ್ತರವಾಗಿಲ್ಲ.

**ಇ) ಕೆಳಗಿನ ವಾಕ್ಯವನ್ನು ಸಾಮಾನ್ಯ ವಾಕ್ಯಗಳನ್ನಾಗಿ ಪರಿವರ್ತಿಸಿ.** 1

ರವಿಯು ಶಾಲೆಗೆ ಹೋದನು. ಆದರೂ ಕೆಟ್ಟ ಬುದ್ಧಿ ಬಿಡಲಿಲ್ಲ.

**ಈ) ಕೆಳಗಿನ ವಾಕ್ಯವನ್ನು ವರ್ತಮಾನಕಾಲಕ್ಕೆ ಪರಿವರ್ತಿಸಿ.** 1

ಕುಂಬಾರನು ಮಣ್ಣಿನಿಂದ ಮಡಕೆ ಮಾಡುತ್ತಿದ್ದಾನೆ.

**ಉ) ಕೆಳಗಿನ ವಾಕ್ಯದಲ್ಲಿರುವ ಕ್ರಿಯಾಪದವನ್ನು ಗುರುತಿಸಿ ಅದರ ಧಾತುವನ್ನು ತಿಳಿಸಿ.** (½ ½) 1

ನಂಬಿದ್ದರು – ಕ್ರಿಯಾಪದ, ನಂಬು – ಧಾತು.

**ಪ್ರಶ್ನೆ 2. ಕೆಳಗಿನ ಗದ್ಯಾಂಶವನ್ನು ಕನ್ನಡಕ್ಕೆ ರೂಪಾಂತರಿಸಿ.** 5

ಮುಂಜಾನೆ ಬೇಗ ಏಳುವುದರ ದೊಡ್ಡ ಅನುಕೂಲವೆಂದರೆ ದಿನವನ್ನು ಒಳ್ಳೆಯ ರೀತಿಯಲ್ಲಿ ಪ್ರಾರಂಭಿಸಬಹುದು. ನಮ್ಮ ದೈನಂದಿನ ಕಾರ್ಯಕ್ಕೆ ಅದು ಸ್ಫೂರ್ತಿಯನ್ನು ಕೊಡುತ್ತದೆ. ಬೇಗ ಏಳುವವರು ತಡವಾಗಿ ಏಳುವವರಿಗಿಂತ ಹೆಚ್ಚಿನ ಪರಿಶ್ರಮದ ಕೆಲಸಗಳನ್ನು ಮಾಡಬಲ್ಲರು. ಮುಂಜಾನೆಯ ಸಮಯದಲ್ಲಿ ನಮ್ಮ ಬುದ್ಧಿ ನಿರ್ಮಲವಾಗಿದ್ದು, ಯಾವುದೇ ರೀತಿಯ ಇತರ ಸೆಳೆತಗಳಿಲ್ಲದಿರುವುದರಿಂದ ಆ ಸಮಯದಲ್ಲಿ ನಡೆದ ಕೆಲಸ–ಕಾರ್ಯಗಳು ಅತ್ಯಂತ ಅಚ್ಚುಕಟ್ಟಾಗಿರುತ್ತವೆ. ಬೇಗ ಏಳುವವರಿಗೆ ಮುಂಜಾನೆಯ ಪರಿಶುದ್ಧ ಗಾಳಿಯಲ್ಲಿ ವ್ಯಾಯಾಮ ಮಾಡಲು ಸಮಯವೂ ದೊರೆಯುತ್ತದೆ. ಈ ವ್ಯಾಯಾಮದಿಂದ ದಿನದ ಅಂತ್ಯದವರೆಗೂ (ಸಂಜೆಯವರೆಗೂ) ಕೆಲಸ ಮಾಡುವ ಶಕ್ತಿ ದೊರೆಯುತ್ತದೆ. ಬೇಗ ಏಳುವ ವ್ಯಕ್ತಿಗೆ ತನ್ನ ಎಲ್ಲ ಕೆಲಸಗಳನ್ನೂ ಅಚ್ಚುಕಟ್ಟಾಗಿ ಮಾಡಲು ಸಾಕಷ್ಟು ಸಮಯ ಸಿಗುತ್ತದೆ ಎಂಬುದು ತಿಳಿದಿರುವುದರಿಂದ ಆತ ಆತುರವಿಲ್ಲದೆ ಎಲ್ಲ ಕೆಲಸಗಳನ್ನೂ ವ್ಯವಸ್ಥಿತವಾಗಿ ಮುಗಿಸುತ್ತಾನೆ. ಸರಿಯಾದ ಸಮಯಕ್ಕೆ ಕೆಲಸಗಳು ಮುಗಿಯುತ್ತವೆ. ಇದರಿಂದಾಗಿ ಸಾಕಷ್ಟು ವಿಶ್ರಾಂತಿ, ವಿರಾಮ ಮಲಗುವವರೆಗೂ ದೊರೆಯುತ್ತದೆ. ಹೀಗೆ ಮಧ್ಯರಾತ್ರಿಗೆ ಮೊದಲೇ ಆಳವಾದ ನಿದ್ರೆಯನ್ನು ಮಾಡುವುದರಿಂದ ಸಂಪೂರ್ಣ ವಿಶ್ರಾಂತಿ ದೊರೆತು, ಮರುದಿನ ಮುಂಜಾನೆಯೇ ಎದ್ದು ಒಳ್ಳೆಯ ಆರೋಗ್ಯ ಮತ್ತು ಸ್ಫೂರ್ತಿಯಿಂದ ಮರುದಿನದ ಪರಿಶ್ರಮದ ದುಡಿತಕ್ಕೆ ಸಿದ್ಧನಾಗುತ್ತಾನೆ.

**ಪ್ರಶ್ನೆ 3. ಕೆಳಗಿನವುಗಳಲ್ಲಿ ಬೇಕಾದ ಎರಡಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡಿಸಿ, ಛಂದಸ್ಸಿನ ಹೆಸರು ತಿಳಿಸಿ.** **2½x2=5**

– U U / U _ U / _ _ /
1. ರಾ ವ ಣ / ನ ರೂ ಪು / ಸೀ ತಾ /

_ U U / U U _ / U _ U / U U _ / U U _ /
ದೇ ವಿ ಗೆ / ತೃ ಣ ಕ / ಲ್ಪ ಮಾ ಯ್ತು / ಪ ತಿ ಭ / ಕ್ತಿ ಯೊ ಳಾ /
ಇದು 'ಕಂದ' ಪದ್ಯದ ಛಂದಸ್ಸು.

_ U / U U UU / _ U / _ U U /
2. ಆ ರಿ / ಗು ಸು ರು ವೆ / ನಾ ರ / ಸಾ ರು ವೆ /
_ U / U U U U / _ U / U U U U /
ನಾ ರಿ / ಗೊ ರ ಲು ವೆ / ನಾ ರಿ / ಗ ರು ಹು ವೆ /
_ U / _ U U / UU U / _ U U / _ U / U U U U / _ /
ನಾ ರ / ಬೇ ಡು ವೆ / ನ ಕ ಟ / ಹೆಂ ಗ ಸು / ಜ ನ್ಮ / ವ ನು ಸು ಡ / ಲಿ /
ಇದು ಭಾಮಿನಿ ಷಟ್ಪದಿ.

ಸಗಣ ಭಗಣ ರಗಣ ನಗಣ ಮಗಣ ಯಗಣ ಲ ಗು
U U _ / _ U U / _ U _ / U U U / _ _ _ / U _ _ U _
3. ಪೊ ಡೆ ಯೊಳ್ / ತುಂ ಬಿ ರೆ / ಪಂ ಕ ಮೇ / ಲೆ ತೊ ಳೆ / ಯಲ್ ತಾಂ ಶು / ದ್ಧ ನೇ ನ / ಪ್ಪ ನೇ /
ಇದು ಸ್ರಗ್ಧರಾ ವೃತ್ತ.

**ಪ್ರಶ್ನೆ 4. ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಗಾದೆಗಳನ್ನು ವಿಸ್ತರಿಸಿ ಬರೆಯಿರಿ.** **2½ x 2=5**

ಗಾದೆಯ ಅಂಕ ನೀಡಿಕೆ ಹೀಗಿದೆ–ಪೀಠಿಕೆ, ಹೊರಅರ್ಥ–½, ಒಳ ಅರ್ಥ–1½, ಭಾಷಾ ಶೈಲಿ–½

**ಪ್ರಶ್ನೆ 5. ಕೆಳಗಿನ ಪ್ರಶ್ನೆಗಳಿಗೆ ನಿರ್ದೇಶಿಸಿರುವಂತೆ ಉತ್ತರಿಸಿ.** ½ x 4=**2**

**1. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

1. ಮೀಯಲು+ಆತ 2. ಬೈದ+ಅನುಜಾತನಂ 3. ಒಬ್ಬಳನು+ಆಳಲಾರಿರಿ 4. ರೇಖಾಂಶಗಳು+ಅನ್ನು **ಅಥವಾ** ರೇಖಾ+ಅಂಶಗಳನ್ನು.

**2. ಕೆಳಗಿನವುಗಳ ವಿಭಕ್ತಿ ಪ್ರತ್ಯಯ ಬರೆಯಿರಿ.** ½ x 2=**1**

1. ಸುಜ್ಞಾನ+ಇಂ=ತೃತೀಯಾ ವಿಭಕ್ತಿ ಪ್ರತ್ಯಯ 2. ದೆಸೆದೆಸೆ+ಇಗೆ=ಚತುರ್ಥಿ ವಿಭಕ್ತಿ ಪ್ರತ್ಯಯ.

**3. ಕೆಳಗಿನ ಪದಗಳ ತತ್ಸಮ ತದ್ಭವಗಳನ್ನು ಬರೆಯಿರಿ.** 1x2=**2**

1. ಯೋಗಿ 2. ಸಿರಿ.

## Section – B - Reading Comprehension : 10 Marks
### ವಿಭಾಗ – ಬಿ : 10 ಅಂಕಗಳು

**ಪ್ರಶ್ನೆ 6. ಕೆಳಗಿನ ಗದ್ಯಭಾಗ ಓದಿಕೊಂಡು ಅದರ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಜೀವನದ ಬಹುಮುಖ್ಯವಾದ ಒಂದು ಸ್ಥಾಯಿಭಾವ ಒಲವು–ಪ್ರೀತಿ. **1**
2. ಹಿರಿಯರ ಬಗೆಗಿನ ಪ್ರೀತಿ, ಕಿರಿಯರ ಮೇಲಣ ಪ್ರೀತಿ ಮತ್ತು ಸಮಾನರಲ್ಲಿ ಪರಸ್ಪರ ಪ್ರೀತಿಗಳು ಪ್ರೀತಿಯ ಮೂರು ಮಜಲುಗಳು. **1**
3. ಇಬ್ಬರೂ ಒಂದೇ ನೆಲದಲ್ಲಿ ನಿಂತು, ಒಬ್ಬರನ್ನೊಬ್ಬರು ಪೂರ್ಣವಾಗಿ ಅರಿತುಕೊಂಡು ಪರಸ್ಪರ ಪ್ರೀತಿಸುವುದೇ ಗೆಳೆತನದ ನಿರ್ವ್ಯಾಜ ಪ್ರೀತಿ. **2**
4. ಬಸಿರಿನಿಂದ ಹೊರಕ್ಕೆ ಬಿದ್ದ ಕ್ಷಣದಿಂದ ಉಸಿರು ನಿಲ್ಲುವ ತನಕ ಮನುಷ್ಯಜೀವನವನ್ನು ಏಕಸೂತ್ರದಿಂದ ಪ್ರೀತಿ ನಿಯಂತ್ರಿಸುತ್ತದೆ. **1**

**ಪ್ರಶ್ನೆ 7. ಪದ್ಯದ ಸಾರಾಂಶ.** 5

ಪುಟ್ಟ ಹಕ್ಕಿಯೊಂದು ಕಡ್ಡಿಕಡ್ಡಿಯನ್ನು ತಂದು ತನ್ನ ಗೂಡನ್ನು ನಿರ್ಮಿಸುತ್ತದೆ. ಎಂತಹುದೇ ಬಿರುಗಾಳಿ, ಮಳೆಗಳಿಗೂ ಅದು ಅಂಜದೆ, ಗೂಡಿನಿಂದ ಹೊರಗೆ ಬಂದು ಮಳೆಯಲ್ಲಿ ಜಳಕ ಮಾಡುತ್ತದೆ. ಮುಂಜಾನೆ ಎದ್ದು ಸೂರ್ಯನನ್ನು ಸ್ವಾಗತಿಸಿ, ಗೀತೆ ಹಾಡುತ್ತದೆ. ಈಗ ಜಗತ್ತಿನಲ್ಲಿ ಅದನ್ನು ಬೇಟೆಯಾಡುವವರೇ ಹೆಚ್ಚು. ಆದರೂ ಕೂಡ ಅದು ಈ ಮೂಲೆಯಿಂದ ಆ ಮೂಲೆಗೆ, ಈ ಮೂಲೆಯಿಂದ ಆ ಮೂಲೆಗೆ ರೆಕ್ಕೆ ಬಿಚ್ಚಿ ಹಾರುತ್ತಿರುತ್ತದೆ. ಇದಕ್ಕೆ ಭೂಮಿಯಲ್ಲಿ ಭುಜಂಗನ/ಹಾವಿನ ಕಾಟ, ಆಕಾಶದಲ್ಲಿ ಗಿಡುಗನ ಭಯವಿದ್ದರೂ ಯಾವುದಕ್ಕೂ ಹೆದರದೆ ತನ್ನ ರೆಕ್ಕೆಗಳನ್ನು ಬಿಚ್ಚಿ ಹಾರುತ್ತಿರುತ್ತದೆ.

## Section – C - Writing : 15 Marks
### ವಿಭಾಗ – ಸಿ : 15 ಅಂಕಗಳು

**ಪ್ರಶ್ನೆ 8. ಕೆಳಗಿನ ಯಾವುದಾದರೂ ಒಂದನ್ನು ಕುರಿತು ನಿಮ್ಮ ಅನುಭವಗಳನ್ನು ಬರೆಯಿರಿ.** 5

ಇದಕ್ಕೆ ಅಂಕ ನೀಡಿಕೆ ಹೀಗಿದೆ : ಪೀಠಿಕೆ–½, ವಿಷಯ, ವಸ್ತುವಿಗೆ– 2, ಭಾಷಾಶೈಲಿ–1, ಪ್ರಸ್ತುತಿ–1, ಉಪಸಂಹಾರ–½.

**ಪ್ರಶ್ನೆ 9. ನಿಮ್ಮ ಜಿಲ್ಲೆಯಲ್ಲಿ ತಲೆದೋರಿರುವ ಬರಗಾಲದ ಪರಿಸ್ಥಿತಿಯ ಬಗ್ಗೆ ವಿವರಿಸುತ್ತ ಪತ್ರಿಕಾ ಸಂಪಾದಕರಿಗೆ ಒಂದು ಪತ್ರ ಬರೆಯಿರಿ.** 5

ಪತ್ರಕ್ಕೆ ಅಂಕ ನೀಡಿಕೆ ಹೀಗಿದೆ : ಇಂದ/ಸ್ಥಳ–1, ಮಾನ್ಯರೇ, ವಿಷಯ–1, ಪತ್ರದ ಒಡಲು–1½, ಮುಕ್ತಾಯ, ಸಹಿ–½, ಭಾಷೆ, ಬಳಸಿದ ಪದಗಳಿಗೆ–1.

**ಪ್ರಶ್ನೆ 10. ಕೆಳಗಿನ ಗದ್ಯಭಾಗವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ.** 5

ಭಾಷೆಗಳ ಸಾವು ಇತಿಹಾಸದಲ್ಲಿ ಪುನರಾವರ್ತನೆಯಾಗಿದೆ. ಯುರೋಪ್ ಸಂಸ್ಕೃತಿ ವಿಶ್ವಾದ್ಯಂತ ಪ್ರಸರಿಸಿ ಸ್ಥಳೀಯ ಭಾಷೆಗಳ ಸಾವಿಗೆ ಕಾರಣವಾಗುತ್ತಿವೆ. ಎಲ್ಲೆಡೆ ತಮ್ಮ ಸಂಸ್ಕೃತಿ, ಭಾಷೆಗಳನ್ನು ಕೀಳಾಗಿ ಕಂಡು ವಿದೇಶಿ ಸಂಸ್ಕೃತಿಯನ್ನು ಅನುಸರಿಸಲಾಗುತ್ತಿದೆ. ಇದು ಜಗತ್ತಿಗೇ ಆದ ಸಾಂಸ್ಕೃತಿಕ ನಷ್ಟ. ಈ ಕಾರಣಕ್ಕಾಗಿ ಯುನೆಸ್ಕೋ ಅಪಾಯದಲ್ಲಿರುವ, ನಶಿಸುತ್ತಿರುವ ಭಾಷೆಗಳ ಉಳಿವಿಗಾಗಿ 1996ರಲ್ಲಿ ಜಗತ್ತಿನಾದ್ಯಂತ ಅದೃಶ್ಯವಾಗುತ್ತಿರುವ ಭಾಷೆಗಳ ನಕ್ಷೆಯನ್ನು ಸಿದ್ಧಪಡಿಸಿತು.

ಇಂಗ್ಲೀಷ ವ್ಯಾಮೋಹಕ್ಕೆ ಒಳಗಾಗಿರುವ ವಿಶ್ವದ ಎಲ್ಲ ಪ್ರಾದೇಶಿಕ ಭಾಷೆಗಳು ಅಪಾಯದಲ್ಲಿದ್ದು, ಅಳಿವಿನಂಚಿನಲ್ಲಿವೆ. ಅವುಗಳ ಉಳಿವಿಗಾಗಿ ಭಾರೀ ಆಸಕ್ತಿ ತೋರಿ, ಅವರವರ ಭಾಷೆಯನ್ನು ಕಲಿಯಲು ಯುವ ಪೀಳಿಗೆಯನ್ನು ಪ್ರೋತ್ಸಾಹಿಸುವುದರ ಮೂಲಕ ವಿದೇಶೀ ಭಾಷೆ ಮತ್ತು ಸಂಸ್ಕೃತಿಯನ್ನು ಅಪ್ಪಿಕೊಳ್ಳುವವರ ಕಣ್ತೆರೆಸಬೇಕಾಗಿದೆ.

## Section – D - Literature : Prose : 15 Marks
### ವಿಭಾಗ ಡಿ – (ಪಠ್ಯಗಳ ಅಧ್ಯಯನ) : ಗದ್ಯಭಾಗ : 15 ಅಂಕಗಳು

**ಪ್ರಶ್ನೆ 11. ಕೆಳಗಿನವುಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. (ನಾಲ್ಕಕ್ಕೆ)** 1x4=4

1. ಬಸಲಿಂಗನಿಗೆ ಕಾಣಿಸಿಕೊಂಡ ತೊಂದರೆ ಅವನ ಎಡಗಣ್ಣಲ್ಲಿ ಕಾಣಿಸಿಕೊಂಡ ನೋವು.
2. ದುರಾಸೆಯ ಹುಡುಗನನ್ನು ನಿರಾಕರಿಸಿದವರು ನಿಶಾ ಶರ್ಮ.
3. ದಣಿಗಳು ಹೊಳೆಯ ಸೆರಗಿಗೂ ತೋಟಕ್ಕೂ ನಡುವೆ ಎಬ್ಬಿಸಿದ ಧರೆಯನ್ನು ಕೆಡವಲು ಹೊಳೆ ಹೊಂಚು ಹಾಕುತ್ತಿರುತ್ತದೆ.
4. ಭಗವಂತನ ಸೃಷ್ಟಿಯಲ್ಲಿರುವವರೆಲ್ಲ ಆತನ ಬಂಧುಗಳು. ಯಾರು ಅವರ ಸೇವೆ ಮಾಡುತ್ತಾರೋ ಅವರೆ ದೇವರಿಗೆ ಹತ್ತಿರವಾದವರು.
5. ಹೃದ್ಯವೆನಿಸುವ (ಹಿತಕರವಾದ) ಗದ್ಯದಲ್ಲಿ ಕತೆ ಹೇಳಬೇಕೆಂದು ಮನೋರಮೆ ಕೇಳಿದಳು.

**ಪ್ರಶ್ನೆ 12. ಕೆಳಗಿನವುಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. (ಎರಡಕ್ಕೆ)** 2x2=4

1. ಉಳದಿರುವ ನೆಲ, ಮಗುವಿನ ಕಾಯಿಲೆ–ಇವೆಲ್ಲವೂ ಬಸಲಿಂಗನಿಗೆ ತನ್ನ ಕಷ್ಟದ ಮುಂದೆ ಗೌಣವಾಗಿ ಕಾಣತೊಡಗಿದವು.
2. ರೈಲ್ವೆ, ಅಂಚೆ ಇಲಾಖೆಗಳು ಪ್ರಾದೇಶಿಕ ಭಾಷೆಗಳ ಮೇಲೆ ಸಾಕಷ್ಟು ಮಲತಾಯಿ ಧೋರಣೆ ಬೆಳೆಸಿಕೊಂಡಿವೆ. ಕನ್ನಡ ನಾಡಿನ ಸಣ್ಣಪುಟ್ಟ ರೈಲ್ವೆ ಸ್ಟೇಶನ್‌ಗಳಲ್ಲಿಯೂ ಹಿಂದಿ, ಇಂಗ್ಲೀಷ್‌ಗಳೇ ರಾರಾಜಿಸುತ್ತಿವೆ.
3. ಕೈಗಾರಿಕೋದ್ಯಮಿಗಳಿಂದ ಗಗನಚುಂಬಿ ಮರಗಳು ನೆಲಕ್ಕುರುಳಿದವು. ದಿಮ್ಮಿ ಕೊಳ್ಳಲು ಗುತ್ತಿಗೆದಾರರು ಮುಂದೆ ಬಂದರು. ಫಲವತ್ತಾದ ಭೂಮಿಯಲ್ಲಿ ರಸ್ತೆ ನಿರ್ಮಾಣವಾಗಿ ಹೊಗೆಯುಗುಳುವ, ಗಡಗಡ ಸದ್ದು ಮಾಡುವ ಲಾರಿ, ಟ್ರಾಕ್ಟರುಗಳು ಬಂದವು. ಸರ್ಕಾರದ ಉತ್ತೇಜನದಿಂದ ಕಾಡುಗಳು ನಾಶವಾದವು.

**ಪ್ರಶ್ನೆ 13. ಕೆಳಗಿನ ಪ್ರಶ್ನೆಗೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. (ಒಂದಕ್ಕೆ)** **3x1=3**

1. "ಅದೃಷ್ಟವನ್ನೇ ಅವಲಂಬಿಸಿ ಬದುಕಲು ಸಾಧ್ಯವೇ?"
   ಪಾಠ : "ಆಯ್ಕೆಯಿದೆ ನಮ್ಮ ಕೈಯಲ್ಲಿ". ಲೇಖಕಿ : ನೇಮಿಚಂದ್ರ. ಕೃತಿ : 'ಬದುಕು ಬದಲಿಸಬಹುದು'.
   ಸಂದರ್ಭ : ಸಾಮಾನ್ಯವಾಗಿ ಜನರಲ್ಲಿ ಒಂದು ಮನೋಭಾವನೆಯಿದೆ. 'ಏನ್ ಮಾಡೋಕಾಗತ್ತೆ', 'ಎಲ್ಲಾ ಹಣೆಬರಹ' ಎಂದಾಗ ಲೇಖಕಿ ರೇಗಿ ಹೋಗುತ್ತಾರೆ. ಕೆಲವೊಮ್ಮೆ ಆಗುವುದನ್ನು ತಡೆಯಲು ಆಗದಿರಬಹುದು, ಪ್ರಯತ್ನಿಸಬಹುದಲ್ಲ ಎಂಬುದು ಇದರ ಅರ್ಥ.
2. "ಅನಕ್ಷರಸ್ಥರ ಪಾರ್ಲಿಮೆಂಟು"
   ಕೃತಿ: "ಸಮಗ್ರ ಲಲಿತ ಪ್ರಬಂಧಗಳು". ಲೇಖಕರು : ವೀರೇಂದ್ರ ಸಿಂಪಿ. ಪಾಠ : 'ಹಳ್ಳಿಯ ಚಹಾ ಹೋಟೆಲುಗಳು'.
   ಸಂದರ್ಭ : ಹಳ್ಳಿಯ ಹೋಟೆಲ್ ಎಂದರೆ ಅದೊಂದು ಸಾರ್ವಜನಿಕರ ಕೂಟ, ರಸಿಕರ, ಉಂಡಾಡಿಗಳ ನಿವಾಸ, ತರುಣರ ಕ್ಲಬ್ಬು, ಗೃಹಸ್ಥರ ವಿಶ್ರಾಮ ಗೃಹ, ವೃದ್ಧರ ಬಾಯಿಚಪಲ ತಣಿಸುವ ಅಕ್ಷಯ ಪಾತ್ರೆ, ಅನಕ್ಷರಸ್ಥರ ಪಾರ್ಲಿಮೆಂಟು, ಸರ್ವ ವಯಸ್ಸಿನ, ಸರ್ವ ಜಾತಿಗಳ ಜನರಿಗೆ ಇಲ್ಲಿ ಸಮಾನವಾದ ಸ್ಥಾನವಿದೆ ಎಂದು ಹೀಗೆ ಹೇಳುತ್ತಾರೆ.
3. "ಇದೇ ಲೋಟವಲ್ಲವೇ..... ತನ್ನ ಬೆವರಿನ ಬೆಲೆ ಕಳೆದದ್ದು"
   ಪಾಠ : "ಧಣಿಗಳ ಬೆಳ್ಳಿ ಲೋಟ". ಲೇಖಕಿ : ಡಾ.ಎಚ್. ನಾಗವೇಣಿ ಕೃತಿ : 'ಮೀಯುವ ಆಟ'.
   ಸಂದರ್ಭ : ಕುದುಪ, ಚಿನ್ನಮ್ಮ ಹೊಳೆಯ ಹೂಳೆತ್ತಿ ಧಣಿಗಳ ತೆಂಗಿನ ತೋಟಕ್ಕೆ ಹಾಕುತ್ತಿರುತ್ತಾರೆ. ಧಣಿಗಳು ನೆರಳಲ್ಲಿ ಕುಳಿತು ಕೆಲಸ ಮಾಡಿಸುತ್ತಿರುತ್ತಾರೆ. ಹೊಳೆಯ ಹೂಳಿನ ಉದರದೊಳಗಿದ್ದ ಬೆಳ್ಳಿ ಲೋಟ ಸಿಗುತ್ತದೆ. ಚಿನ್ನಮ್ಮ ಆ ಲೋಟದ ಚಂದವನ್ನು ಮತ್ತೆ ಮತ್ತೆ ತಿರುಗಿಸಿ ನೋಡುತ್ತಿದ್ದಂತೆ ಆಕೆಯ ಒಡಲಲ್ಲೂ ಅದೆಷ್ಟೋ ಭಾವನೆಗಳು ಗಿರಕಿ ಹೊಡೆಯುತ್ತಿರುವುದನ್ನು ಕತೆಯ ನಿರೂಪಕಿ ಹೀಗೆ ವಿವರಿಸಿದ್ದಾರೆ.

**ಪ್ರಶ್ನೆ 14. ಕೆಳಗಿನ ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ. (ಒಂದಕ್ಕೆ)** **4x1=4**

1. ಕನ್ನಡಿಗರೆನ್ನಿಸಿಕೊಳ್ಳಲು ಯಾವ ಯೋಗ್ಯತೆಗಳು ನಮ್ಮನ್ನು ಚುಚ್ಚಬೇಕು? ವಿವರಿಸಿ.

1. ಕನ್ನಡ ಹೇಳುವುದಕ್ಕೆ ಮಾತ್ರವಲ್ಲ ಅನುಸರಿಸುವುದಕ್ಕೆ ಎಷ್ಟು ಜನ ತಿಳಿದಿದ್ದೇವೆ? ನಮ್ಮ ಮಕ್ಕಳನ್ನು ಯಾವ ಶಾಲೆಗಳಲ್ಲಿ ಓದಿಸುತ್ತಿದ್ದೇವೆ? ನಾವು ಯಾವ ಪತ್ರಿಕೆಗಳನ್ನು ಓದುತ್ತಿದ್ದೇವೆ? ನಾವು ನೋಡುವುದು ಯಾವ ಸಿನಿಮಾಗಳನ್ನು? ನಮ್ಮ ಮನೆಯ ಬೋರ್ಡು ಯಾವ ಭಾಷೆಯಲ್ಲಿದೆ? ನಮ್ಮ ಲೆಟರ್‌ಹೆಡ್ ಅಚ್ಚಾಗಿರುವುದು ಯಾವ ಭಾಷೆಯಲ್ಲಿ? ನಾವು ಬರೆಯುವ ಕಾಗದಪತ್ರಗಳಲ್ಲಿ ಎಷ್ಟು ಭಾಗ ಕನ್ನಡ? ಇಂಥ ನೂರು ಪ್ರಶ್ನೆಗಳನ್ನು ನಾವು ಕೇಳಿಕೊಳ್ಳಬೇಕು. ಕನ್ನಡಿಗರೆನ್ನಿಸಿಕೊಳ್ಳಲು ಈ ಯೋಗ್ಯತೆಯ ಪ್ರಶ್ನೆಗಳು ನಮ್ಮನ್ನು ಚುಚ್ಚಬೇಕು.
2. ಮುದ್ದಣ–ಮನೋರಮೆಯರ ಸಂವಾದದ ಸ್ವಾರಸ್ಯವನ್ನು ವಿವರಿಸಿ.
   ರಾಮಾಶ್ವಮೇಧದಲ್ಲಿ ಮುದ್ದಣ–ಮನೋರಮೆಯರ ಸಂವಾದ ಭಾಗಗಳು ಬಹಳ ಸೊಗಸಾಗಿವೆ. ದಂಪತಿಗಳ ಸಂವಾದ ಗಮನ ಸೆಳೆಯುತ್ತದೆ. ಹೊಸ ಕಾಲದ ಬೇಕು, ಬೇಡಗಳ ಚರ್ಚೆ ಇಲ್ಲಿದೆ. ತಿರುಳುಗನ್ನಡದ ಬಗೆಗೆ ಅಭಿಮಾನ, ಕ್ಲಿಷ್ಟ ವಾಕ್ಯರಚನೆಯ ಬಗೆಗೆ ವಿರೋಧ, ವಸ್ತು, ರಸ, ಶೈಲಿ ಪ್ರಕಾರ ಎಲ್ಲದರ ಬಗ್ಗೆ ಇದೆ. ಮನೋರಮೆಯ ಪ್ರಬುದ್ಧ ವಿಮರ್ಶೆ, ಪ್ರೀತಿ, ಸಹೃದಯತೆ ಕಾಣುತ್ತದೆ. ಕನ್ನಡದ ಕಸ್ತೂರಿಯ ಪರಿಮಳ ಕಾಣುತ್ತದೆ.

## Section – D - Literature : Poetry : 15 Marks

### ಪದ್ಯಭಾಗ : 15 ಅಂಕಗಳು

**ಪ್ರಶ್ನೆ 15. ಕೆಳಗಿನವುಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. (ನಾಲ್ಕಕ್ಕೆ)** **1x4=4**

1. ಅಂಧಕನ (ಕುರುಡನ)ಕೈಯಲ್ಲಿ ದರ್ಪಣವಿದ್ದು ಫಲವಿಲ್ಲ.
2. ತಂದೆತಾಯಿಗಳಿಗೆ ಮುಪ್ಪಿನಲ್ಲಿ ಒದಗದ ಮಗ ನಿಷ್ಪ್ರಯೋಜಕ.
3. ಉತ್ತಮರ ಗೆಳೆತನ ಪುತ್ಥಳಿ ಬಂಗಾರದಂತೆ ಇರಬೇಕು.
4. ಜೀಸಸ್‌ನ ಮುಖಮುದ್ರೆ ಯಾತನೆಗೂ ನಲ್ವಾತನೇ(ಒಳ್ಳೆಯ ಮಾತು) ಆಡುವಂತಿದೆ.
5. ಕವಯಿತ್ರಿ ತನ್ನವರ ದೀನ–ದಲಿತತನಕ್ಕೆ ಧಿಕ್ಕಾರವಿರಲಿ ಎನ್ನುತ್ತಾರೆ.

**ಪ್ರಶ್ನೆ 16. ಕೆಳಗಿನವುಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. (ಎರಡಕ್ಕೆ)** **2x2=4**

1. ಸೀತೆ ರಾವಣನು ಆಗಮಿಸಿದುದನ್ನು ಖಚರಕಾಂತೆಯರಿಂದ ತಿಳಿದಳು. ಸೀತೆಯು "ರಾಮ–ಲಕ್ಷ್ಮಣರ ಬಗೆಗೆ ತಾನೇನು ಕೆಟ್ಟ ವಾರ್ತೆಯನ್ನು ಕೇಳುವೆನೋ" ಎಂದು ತಲ್ಲಣಗೊಂಡಳು.
2. ಮಗು ಕ್ಯೂ ನಿಲ್ಲುವುದನ್ನು, ಫುಟ್–ಪಾತಿನಲ್ಲಿ ಸಂಚರಿಸುವುದನ್ನು, ರಸ್ತೆ ದಾಟುವಾಗ ಎಚ್ಚರಿಕೆಯನ್ನು, ಎಲ್ಲಿಯೂ ನಿಲ್ಲದೆ ಓಡುವ ಬದುಕನ್ನು, ಹೇಗಾದರೂ, ಎಲ್ಲಾದರೂ, ಅವರಿವರನ್ನು ತಳ್ಳಿಯಾದರೂ ಸರಿ ಮುನ್ನುಗ್ಗಿ ಸ್ಥಾನ ಗಿಟ್ಟಿಸುವುದನ್ನು ಕಲಿಯಿತು.
3. ತೈಲ ಆರಿದಾಗ ದೀಪ ಆರುತ್ತದೆ. ಹತ್ತಿ ಉರಿದು ಮುಗಿದಾಗ ಕಮಟು ವಾಸನೆ ಬರುತ್ತದೆ. ಹಾಗೆಯೇ ಆತ್ಮಕ್ಕೆ ಕಮಟು ಹತ್ತುವುದು ಎಂದರೆ ದೇಹ ನಾಶವಾಗಿ ಆತ್ಮ ಅಂತಿಮವಾಗುವುದು.

**ಪ್ರಶ್ನೆ 17. ಕೆಳಗಿನ ಪ್ರಶ್ನೆಗೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. (ಒಂದಕ್ಕೆ)** **3x1=3**

1. "ಕಲಿ ಭೀಮನೇ ಮಿಡುಕುಳ್ಳ ಗಂಡನು".

ಪದ್ಯ: ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು ಕವಿ: ಕುಮಾರವ್ಯಾಸ ಕೃತಿ: ಕರ್ಣಾಟಭಾರತ ಕಥಾಮಂಜರಿ

ಸಂದರ್ಭ: ಕೀಚಕನ ಉಪಟಳವನ್ನು ತಪ್ಪಿಸಲು ಯಾರು ಸಮರ್ಥರೆಂಬುದನ್ನು ದ್ರೌಪದಿ ನಿರ್ಧರಿಸುವಾಗ ತನ್ನಲ್ಲಿಯೇ ಹೀಗೆ ಹೇಳಿಕೊಳ್ಳುತ್ತಾಳೆ. ತನ್ನ ಪತಿಗಳೈವರಲ್ಲಿ ಕಲಿ ಭೀಮನೊಬ್ಬನೇ ಪರಾಕ್ರಮಶಾಲಿಯಾದ ಗಂಡನು. ತನ್ನ ಸಂಕಟ ಮತ್ತು ನೋವನ್ನು ಅರ್ಥಮಾಡಿಕೊಳ್ಳುವವನು. ಕೀಚಕನನ್ನು ಗೆಲ್ಲಲು ಸಮರ್ಥನಾದ ಅವನಲ್ಲಿಯೇ ತನ್ನ ದುಃಖವನ್ನು ಹೇಳಿಕೊಳ್ಳುವೆನೆಂದು ದ್ರೌಪದಿ ನಿರ್ಧರಿಸುತ್ತಾಳೆ.

2. "ತುಂಬಿರುವ ತನಕ ತುಂತುಂಬಿ ಕುಡಿಯಬೇಕು".

ಆಯ್ಕೆ: ದ.ರಾ. ಬೇಂದ್ರೆಯವರ 'ಮುಕ್ತಕಂಠ' ಸಂಕಲನದ 'ಬೆಳಗುಜಾವ' ಕವನದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ನಮ್ಮ ಜೀವನದ ಯೌವನದ ಕಾಲವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಕವಿ ಕರೆ ನೀಡುತ್ತ ಹೀಗೆ ಹೇಳುತ್ತಾರೆ. ಎಲ್ಲೆಡೆ ಬೆಳಗು ಮೂಡಿರುವಾಗ ಅದರ ಸೌಂದರ್ಯವನ್ನು ಆಸ್ವಾದಿಸುವ ಸಮಯದಲ್ಲಿ ಹುಸಿನಿದ್ದೆ ಬೇಡ. ದುಂಬಿಯಂತೆ ಹಾರಾಡಬೇಕಾದ ಯೌವನ ಕಾಲದಲ್ಲಿ ಕಾರ್ಯಪ್ರವೃತ್ತರಾಗಿ, ಸಮಯವನ್ನು ಸಾರ್ಥಕಗೊಳಿಸಿಕೊಳ್ಳಿ ಎಂದಿದ್ದಾರೆ.

**ಪ್ರಶ್ನೆ 18. ಕೆಳಗಿನ ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ. (ಒಂದಕ್ಕೆ)** **4x1=4**

1. ಜಾಲಿಮರ ಮತ್ತು ದುರ್ಜನರನ್ನು ಪುರಂದರದಾಸರು ಸಮೀಕರಿಸಿರುವುದರ ಔಚಿತ್ಯವನ್ನು ಚರ್ಚಿಸಿರಿ.

ಜಾಲಿಮರ ಮತ್ತು ದುರ್ಜನರನ್ನು ಪುರಂದರದಾಸರು ಸಮೀಕರಿಸುತ್ತಾರೆ. ಹೂವಿಲ್ಲದ, ಹಣ್ಣಿಲ್ಲದ, ನೆರಳಿಲ್ಲದ ರಸಹೀನವಾದ ಈ ಮರವು ಸಮಾಜ ಕಂಟಕರ ಅವಗುಣಗಳನ್ನು ಪ್ರತಿನಿಧಿಸುತ್ತದೆ. ಒಳ್ಳೆಯವರಿಗೆ ದುರ್ಜನರು ಆಶ್ರಯ ನೀಡರು. ದುರ್ಬಲರಿಗೆ ಸಹಾಯ ಮಾಡರು. ಜ್ಞಾನದ ಗಂಧವಾಗಲೀ, ಸ್ನೇಹರಸವಾಗಲೀ ಇವರಲ್ಲಿಲ್ಲ. ಈ ಮರದ ತುಂಬ ಮುಳ್ಳುಗಳಿರುವಂತೆ ಆಮೂಲಾಗ್ರವಾಗಿ ಕಂಟಕವೃತ್ತಿಯನ್ನೇ ಇವರು ಹೊಂದಿರುತ್ತಾರೆ. ಹಾಗಾಗಿ ಜಾಲಿಮರ–ದುರ್ಜನರು ಒಂದೇ ಎಂದಿದ್ದಾರೆ ಕವಿ.

2. ವೃದ್ಧರ ತವಕ–ತಲ್ಲಣಗಳನ್ನು ಕವಯಿತ್ರಿ ಲಲಿತಾ ಸಿದ್ಧಬಸವಯ್ಯ ಅವರು ಹೇಗೆ ಚಿತ್ರಿಸಿದ್ದಾರೆ?

ವಯೋವೃದ್ಧ ತಂದೆತಾಯಿಯರನ್ನು ಮಕ್ಕಳು ಹಂಚಿಕೊಂಡಿದ್ದಾರೆ. ಕನ್ನಡ ನಾಡಿನಲ್ಲಿ ಹಿರಿಯ ಮಗನ ಜೊತೆ ಮುದುಕಿ, ಭಾಷೆ ಬಾರದ ಅಸ್ಸಾಂನಲ್ಲಿ ಕಿರಿಯ ಮಗನ ಜೊತೆ ಮುದುಕ. ಅಲ್ಲಿಯ ಭಾಷೆ ಬಾರದೆ, ಮುದುಕ ಯಾರೊಡನೆಯೂ ಮಾತನಾಡದೆ ಮಾತೇ ಮರೆತು ಹೋಗುತ್ತಿದೆ, ನೀನು ಮಾತಾಡು ಎಂದು ಹೇಳುತ್ತಾನೆ. ಮುದುಕಿಗೆ ಮಗ–ಸೊಸೆಯರು ಎಲ್ಲಿ ಗದರುತ್ತಾರೋ ಎಂಬ ಭಯ. ಮುದುಕಿ ಮೆಲ್ಲನೆ ಪತಿಯ ನೆನೆದು ಅತ್ತರೆ ಮಗ ಗದರುತ್ತಾನೆ. ಮೊಮ್ಮಗಳು ಫೋನ್ ರಿಂಗಾದರೆ ರಾಂಗ್ ನಂಬರ್ ಎಂದು ಅದನ್ನು ಕುಕ್ಕುತ್ತಾಳೆ. ಎಲ್ಲರೂ ಅವರವರ ಕಾರ್ಯಕ್ಕೆ ಹೊರಟರೆ ಸೊಸೆಯೊಬ್ಬಳು ಮನೆಯಲ್ಲೇ ಇದ್ದಾಳೆ. ಅವಳನ್ನು ಒಂದು ನೆವ ಒದಗಿಸಿ ಹೊರ ಕಳಿಸು, ಮುದುಕನೊಡನೆ ಒಂದಿಷ್ಟು ಮಾತನಾಡಿಕೊಳ್ಳುತ್ತೇನೆ ಎಂದು ಮುದುಕಿ ದೇವರಲ್ಲಿ ಮೊರೆ ಇಡುತ್ತಾಳೆ.

## Section – D - Literature : Long Prose : 12 Marks

**ದೀರ್ಘ ಗದ್ಯ (ಕೃಷ್ಣೇಗೌಡನ ಆನೆ) : 12 ಅಂಕಗಳು**

**ಪ್ರಶ್ನೆ 19. ಕೆಳಗಿನವುಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. (ಮೂರಕ್ಕೆ)** 1x3=3

2. ದುರ್ಗಪ್ಪ ಕೊಡಲಿಯನ್ನು ಕೇಳಿ ಪಡೆಯಲು ಬಂದಿದ್ದ.
2. ನಿರೂಪಕರ ಕೊಡಲಿಯ ಆಕಾರ ಸುತ್ತಿಗೆಯಂತಿತ್ತು.
3. ಪುಟ್ಟಯ್ಯ ವೆಟರ್ನರಿ ಸ್ಟಾಕ್‌ಮನ್.
4. ಪೋಲೀಸರು ನಾಗರಾಜನ ಕೋವಿ ಸಿಕ್ಕಿದೆ. ಆದರೆ ಹಣ ಸಿಗಲಿಲ್ಲ ಎಂದು ಮಹಜರು ಬರೆದುಕೊಂಡರು.

**ಪ್ರಶ್ನೆ 20. ಕೆಳಗಿನ ಪ್ರಶ್ನೆಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. (ಒಂದಕ್ಕೆ)** 2x1=2

1. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆ ಹೇಗೆ?
   ಕೃಷ್ಣೇಗೌಡರ ಆನೆ ಕಾಡಿನಿಂದ ಹಿಡಿದು ತಂದು ಪಳಗಿಸಿದ್ದಲ್ಲ. ಘಟ್ಟದ ಕೆಳಗಿನ ಗೂಳೂರು ಮಠದ ಆನೆಯ ಮರಿ. ಇದು ಹುಟ್ಟಿ ಬೆಳೆದದ್ದೆಲ್ಲ ಊರಿನಲ್ಲಿ ಜನಗಳ ನಡುವೆಯೇ. ಹಾಗಾಗಿ ಕಾಡಿನ ಬಗ್ಗೆ ಗೊತ್ತಿರಲಿಲ್ಲ.
2. ಆನೆ ಸಾಕುವುದರ ಬಗ್ಗೆ ಜನರ ನಂಬಿಕೆ ಏನಾಗಿತ್ತು?
   ಆನೆ ಸಾಕುವುದು ಎಂದರೆ ಎಲೆಕ್ಷನ್ನಿಗೆ ನಿಂತ ಹಾಗೆ. ಮನೆಮಠ ಸಂಪೂರ್ಣ ಹಾಳುಮಾಡಿಕೊಂಡು ಹೆಂಡತಿ ಮಕ್ಕಳ ಬಾಯಿಗೆ ಮಣ್ಣು ಹಾಕುವ ಕ್ಷಿಪ್ರ ಮಾರ್ಗ ಇದೆಂದು ಜನರು ನಂಬಿದ್ದರು.

**ಪ್ರಶ್ನೆ 21. ಕೆಳಗಿನ ಪ್ರಶ್ನೆಗೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. (ಒಂದಕ್ಕೆ)** 3x1=3

1. **"ನಿನ್ನ ಪುಕಾರೇನಿದ್ರೂ ಬರ್‍ವಣಿಗೇಲಿ ಇರಬೇಕು".**
   ಪಾಠ : ಕೃಷ್ಣೇಗೌಡನ ಆನೆ. ಲೇಖಕರು : ಕೆ. ಪಿ. ಪೂರ್ಣಚಂದ್ರ ತೇಜಸ್ವಿ. ಕೃತಿ : ಕಿರಗೂರಿನ ಗಯ್ಯಾಳಿಗಳು.
   ಸಂದರ್ಭ : ಫಾರೆಸ್ಟರ್ ನಾಗರಾಜ ದುರ್ಗಪ್ಪನಿಂದ ಕೊಡಲಿ ಕಿತ್ತುಕೊಂಡು ತನ್ನ ಕಛೇರಿಯಲ್ಲಿ ಇಟ್ಟುಕೊಂಡಿದ್ದ. ದುರ್ಗಪ್ಪ ತಾನು ಮರ ಕಡಿದಿಲ್ಲವೆಂದು ಪುನಃ ಹೇಳಿದಾಗ ಹೀಗೆ ಜೋರು ಮಾಡುತ್ತಾನೆ.
2. **"ಕಾಡಾನೆಗಳ ಕಾಟಕ್ಕೂ ಈ ಹೆಣ್ಣಾನೆಯೇ ಕಾರಣ".**
   ಪಾಠ : ಕೃಷ್ಣೇಗೌಡನ ಆನೆ. ಲೇಖಕರು : ಕೆ. ಪಿ. ಪೂರ್ಣಚಂದ್ರ ತೇಜಸ್ವಿ. ಕೃತಿ : ಕಿರಗೂರಿನ ಗಯ್ಯಾಳಿಗಳು.
   ಸಂದರ್ಭ : ಒಂದು ದಿನ ಮುನ್ಸಿಪಲ್ ಪ್ರೆಸಿಡೆಂಟ್ ಖಾನ್ ಸಾಹೇಬರು ಪುರಪ್ರಮುಖರ ಸಭೆ ಕರೆದಿದ್ದರು. ಅಲ್ಲಿ ಆನೆಯದೇ ಪ್ರಧಾನ ವಿಷಯವಾಗಿತ್ತು. ಆಗ ನಾಗರಾಜ ತನಗೆ ಸರಿಯಾದ ವೆಪನ್ ಕೊಟ್ಟರೆ ಈ ಆನೆಯನ್ನು ಮುಗಿಸುವುದಾಗಿ ಹೇಳುವಾಗ ರೇಂಜರ್‌ಗೆ ಹೀಗೆ ಹೇಳಿದ್ದಾನೆ.

**ಪ್ರಶ್ನೆ 22. ಕೆಳಗಿನ ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ. (ಒಂದಕ್ಕೆ)** 4x1=4

1. ಆನೆ ಮತ್ತು ಮಾವುತ ವೇಲಾಯುಧನನ್ನು ಸಾಗಹಾಕಲು ಮಠದವರು ಹವಣಿಸಿದ್ದೇಕೆ?
   ಮಠದ ಜಗದ್ಗುರುಗಳನ್ನು ಜನರು ಅಡ್ಡಪಲ್ಲಕ್ಕಿಯಲ್ಲಿ ಹೊರತೊಡಗಿದ್ದರಿಂದ ಆನೆಗೆ ಆ ಕೆಲಸ ತಪ್ಪಿಹೋಯಿತು. ಇದನ್ನು, ಇದರ ಮಾವುತನನ್ನು ಹೊರಹಾಕಲು ಮಠದವರು ಕಾಯುತ್ತಿದ್ದರು. ಮಾವುತ 24 ಗಂಟೆಯೂ ಕುಡಿದೇ ಇರುತ್ತಿದ್ದ, ಮಠಕ್ಕೆ ದೊಡ್ಡ ತಲೆನೋವಾಗಿದ್ದ. ಆದ್ದರಿಂದ ಆನೆ ಮತ್ತು ಮಾವುತ ವೇಲಾಯುಧನನ್ನು ಸಾಗಹಾಕಲು ಮಠದವರು ಹವಣಿಸಿದರು.
2. ಅರಣ್ಯ ಇಲಾಖೆಯ ಶತ್ರುಗಳ ಕಾರ್ಯಭಾರವನ್ನು ನಾಗರಾಜ ವಿವರಿಸಿದ್ದು ಹೇಗೆ?
   ಪಿಡಬ್ಲ್ಯುಡಿಯವರು, ಕರೆಂಟಿನವರು, ಟೆಲಿಫೋನಿನವರು ಅರಣ್ಯ ಇಲಾಖೆಯ ವೈರಿಗಳು. ಪಿಡಬ್ಲ್ಯುಡಿಯವರು ರಸ್ತೆಗೆ ಟಾರು ಹಾಕಲು ಮರ ಕಡಿಯುವರು. ಕರೆಂಟಿನವರು, ಟೆಲಿಫೋನಿನವರು ಲೈನ್ ಎಳೆಯೋದಕ್ಕೆ ಸಾವಿರಾರು ಎಕರೆ ಕಾಡನ್ನು ಕಡಿದು ಹಾಳು ಮಾಡಿದ್ದಾರೆ. ಹೀಗೆ ಅರಣ್ಯ ಇಲಾಖೆಯ ಶತ್ರುಗಳ ಕಾರ್ಯಭಾರವನ್ನು ನಾಗರಾಜ ವಿವರಿಸಿದನು.

## Brief outline History of Kannada Literature : Marks 08

(Major poets and poetesses)

**ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ (ಕವಿ ಕೃತಿ ಹಿನ್ನೆಲೆಯಲ್ಲಿ)**

**ಪ್ರಶ್ನೆ 23. ಕೆಳಗಿನ ಯಾವುದಾದರೂ ಇಬ್ಬರು ಕವಿಗಳ ಕವಿ–ಕೃತಿ ಪರಿಚಯ ಮಾಡಿಕೊಡಿ.** **4**x2=**8**

1. ನಾಗಚಂದ್ರ : ಕಾಲ – 11ನೇ ಶತಮಾನ. ಹಳೆಗನ್ನಡದ ಜೈನ ಕವಿ. ಸ್ಥಳ – ವಿಜಯಪುರ. ಕೃತಿಗಳು : ಮಲ್ಲಿನಾಥ ಪುರಾಣ, ರಾಮಚಂದ್ರಚರಿತ ಪುರಾಣ, ಚಂಪೂ ಕಾವ್ಯಗಳು. ಬಿರುದು : ಅಭಿನವ ಪಂಪ, ಭಾರತೀಕರ್ಣಪೂರ, ಕವಿತಾಮನೋಹರ. ಪಂಪನ ಕಾವ್ಯಮಾರ್ಗ ಅನುಕರಣೆ. ರಾವಣನ ಉದಾತ್ತತೆಯ ಚಿತ್ರಣ ಇವನ ಕಾವ್ಯದ ಒಂದು ವಿಶೇಷತೆ ಇತ್ಯಾದಿ.

2. ಕುಮಾರವ್ಯಾಸ : ಕಾಲ – 1400. ಸ್ಥಳ : ಗದುಗಿನ ಬಳಿಯ ಕೋಳಿವಾಡ. ಮೂಲ ಹೆಸರು : ನಾರಣಪ್ಪ. ಕೃತಿ : ಗದುಗಿನ ಭಾರತ/ಕುಮಾರವ್ಯಾಸ ಭಾರತ/ಕರ್ಣಾಟಭಾರತ ಕಥಾಮಂಜರಿ. ಹರಿಭಕ್ತ. ಆರಾಧ್ಯ ದೈವ–ಗದುಗಿನ ವೀರನಾರಾಯಣ. ಕಾವ್ಯದಲ್ಲಿ ದೇಸೀಯ ಸೊಗಡು. ಬಿರುದು : ರೂಪಕ ಸಾಮ್ರಾಜ್ಯ ಚಕ್ರವರ್ತಿ ಇತ್ಯಾದಿ.

3. ಕೆ. ಎಸ್. ನಿಸಾರ್ ಅಹಮದ್ : ಜನನ–5.2.1936. ಕೃತಿಗಳು : ನಿತ್ಯೋತ್ಸವ, ಸಂಜೆ ಐದರ ಮಳೆ, ಸ್ವಯಂ ಸೇವೆಯ ಗಿಳಿಗಳು, ನಾನೆಂಬ ಪರಕೀಯ, ಕನ್ನಡದ ಮೊದಲ ಭಾವಗೀತೆಗಳ ಧ್ವನಿಸುರುಳಿ (ನಿತ್ಯೋತ್ಸವ) ಹೊರತಂದವರು. ಶ್ರೇಷ್ಠ ಅನುವಾದಕರು. ವೈಚಾರಿಕ ಲೇಖಕರು. ಪಡೆದ ಪ್ರಶಸ್ತಿಗಳು : ಪದ್ಮಶ್ರೀ, ನಾಡೋಜ, ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ, ಅ.ನ.ಕೃ. ಪ್ರಶಸ್ತಿ. ವಿಭಿನ್ನ ಸಂಸ್ಕೃತಿಯ ಅರಿವು, ವೈಚಾರಿಕ ದೃಷ್ಟಿಕೋನ, ಹದವರಿತ ವ್ಯಂಗ್ಯ ಇವರ ಕಾವ್ಯದ ಮುಖ್ಯ ಲಕ್ಷಣಗಳು.

******************